**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ಸಂಖ್ಯೆಃ 1255-2016**

ಪಿರ್ಯಾದಿದಾರರು ಃ ಸರ್ಕಾರದ ಪರವಾಗಿ ಗಂಗೊಳ್ಳಿ ಪೋಲಿಸ್ ಠಾಣೆ

-ವಿರುದ್ಧ-

ಆರೋಪಿ ಃ ಉಮೇಶ

**ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆಃ 1. ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆ ಕೇಳಿದ್ದೀರಾ?

ಉತ್ತರಃ

ಪ್ರಶ್ನೆಃ 2. ಪ್ರಾಸಾ 1: ಜುಲಿಯಾನ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯ ಪರಿಚಯವಿದೆ, ಆರೋಪಿಯು ಗಂಗೊಳ್ಳಿ ಗ್ರಾಮ ಪಂಚಯತ್‌ನಲ್ಲಿ ಉಗ್ರಾಣಿಯಾಗಿ ಕೆಲಸ ಮಾಡುತ್ತಾರೆ. ದಿ. 26.06.2015 ರಂದು ಬೆಳಿಗ್ಗೆ 11.30 ಗಂಟೆ ಸಮಯಕ್ಕೆ ಗಂಗೊಳ್ಳಿ ಗ್ರಾಮ ಪಂಚಾಯತ್‌ಗೆ ರೇಶನ್ ಕಾರ್ಡು ಮತ್ತು ಜಾತಿ ಮತ್ತು ಆದಾಯ ಸರ್ಟಿಫಿಕೇಟ ಮಡಲು ಕಚೇರಿಗೆ ಹೋಗಿದ್ದು, ಆಗ ಆರೋಪಿಯು ಅಲ್ಲಿ ಇದ್ದು ತಾನು ನಿಮ್ಮ ಕೆಲಸ ಮಾಡಿಕೊಡುತ್ತೇನೆ ಎಂದು ಹೇಳಿ ತನ್ನ ಎಳೆದು ಹತ್ತಿರಕ್ಕ್ಷ ಕರೆದು ಮುತ್ತು ಕೊಟ್ಟು ಎದೆಯನ್ನು ಮುಟ್ಟಿದ್ದು, ಅವರ ಮೊಬೈಲ್‌ನ್ನು ತೆಗೆದು ಅಶ್ಲೀಲ ಚಿತ್ರಣವನ್ನು ತನಗೆ ತೋರಿಸಿರುತ್ತಾರೆ ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ3. ಪ್ರಾಸಾ 1: ಜುಲಿಯಾನ ರವರು ಮುಂದುವರೆದು ಅಲ್ಲದೆ ತನ್ನ ಮೊಬೈಲ್ ಸಂಖ್ಯೆಯನ್ನು ಕೇಳಿ ನಿಮ್ಮ ಮನೆಗೆ ತಾನು ಬರುವುದಾ ಎಂದು ಕೇಳಿದರು ಮಧ್ಯಾಹ್ನ 3.00 ಗಂಟೆಗೆ ಬಾ ಪಂಚಾಯತ್ ಕಚೇರಿಯಲ್ಲಿ ಯಾರು ಇರುವುದಿಲ್ಲ ಎಂದು ಹೇಳಿದ್ದು, ಈ ವಿಷಯವನ್ನು ಯಾರಿಗೆ ಹೇಳಬೇಡ ಹೇಳಿದರೆ ನಿನ್ನನ್ನು ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದು, ಇದರಿಂದ ತನ್ನ ಮನಸ್ಸಿಗೆ ತುಂಬಾ ಬೇಸರ ಆಯಿತು. ನಂತರ ತಾನು ಈ ವಿಚಾರವನ್ನು ಚಾ.ಸಾ.2 ರಿಂದ 4 ಮತ್ತು ಚಾ.ಸಾ.6 ಮತ್ತು 7 ರವರಿಗೆ ತಿಳಿಸಿದ್ದು, ಅವರು ತನಗೆ ಧೈರ್ಯ ಹೇಳಿದ್ದು. ನಂತರ ತಾನು ಪೊಲೀಸರಲ್ಲಿ ಈ ಬಗಗೆ ದೂರನ್ನು ನೀಡಿರುತ್ತೇನೆ ತನಗೆ ಬರೆಯಲು ಬಾರದ ಕಾರಣ ಬೇರೆಯವರಿಂದ ಬರೆಸಿಕೊಂಡಿದ್ದು ದೂರನ್ನು ನಿ.ಪಿ.1 ಎಂದು ಗುರುತಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ4. ಪ್ರಾಸಾ 1: ಜುಲಿಯಾನ ರವರು ಮುಂದುವರೆದು ತಾನು ದೂರು ಕೊಟ್ಟ ನಂತರ ಪೊಲೀಸರು ದಿ. 08.07.2015 ರಂದು ಪಂಚಾಯತಿ ಕಚೇರಿಗೆ ಬಂದು ತಾನು ತೋರಿಸಿಕೊಟ್ಟಂತೆ ಸ್ಥಳ ತನಿಖೆ ಮಾಡಿ ಮಹಜರು ಮಾಡಿ ತನ್ನ ಸಹಿಯನ್ನು ಪಡೆದುಕೊಂಡಿದ್ದು, ಆ ಸಮಯದಲ್ಲಿ ಚಾ.ಸಾ.2, ಚಾ.ಸಾ.3 ಮತ್ತು ಚಾ.ಸಾ.5 ರವರು ಹಾಜರಿದ್ದರು, ಪೊಲೀಸರು ಮಧ್ಯಾಹ್ನ 12.30 ಗಂಟೆಯಿಂದ 1.00 ಗಂಟೆ ತನಕ ಮಹಜರು ಮಾಡಿ ಛಾಯಚಿತ್ರವನ್ನು ತೆಗೆಸಿರುತ್ತಾರೆ. ಮಹಜರನ್ನು ನಿ.ಪಿ.2 ಎಂದು, ಛಾಯಚಿತ್ರವನ್ನು ನಿ.ಪಿ.3 ಎಂದು ಸಿ.ಡಿ.ಯನ್ನು ನಿ.ಪಿ.3(ಎ) ಎಂದು ಗುರುತಿಸಿದ್ದು, ದಿ. 26.06.2015 ರಂದು ಘಟನೆಯಾಗಿದ್ದು ತಾನು ದೂರನ್ನು ದಿ. 06.07.2015 ರಂದು ನೀಡಿದ್ದು, ತನಗೆ ಯಾರು ಸಹಾಯಕ್ಕೆ ಇರದ ಕಾರಣ ಮತ್ತು ಧೈರ್ಯ ಸಾಲದ ಕಾರಣ ದೂರು ನೀಡಲು ತನಗೆ ವಿಳಂಬವಾಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆ:5. ಪ್ರಾಸಾ 1: ಜುಲಿಯಾನ ರವರು ಮುಂದುವರೆದು ಈ ಮೊದಲು ತಾನು ನ್ಯಾಯಾಧೀಶರ ಮುಂದೆ ತನ್ನ ಹೇಳಿಕೆಯನ್ನು ನೀಡಿದ್ದು, ತಾನು ದೂರಿನಲ್ಲಿ ಹೇಳಿರುವ ಎಲ್ಲಾ ವಿಚಾರವನ್ನು ನ್ಯಾಯಾಧೀಶರ ಮುಂದೆ ತನ್ನ ಹೇಳಿಕೆಯಲ್ಲಿ ಹೇಳಿದ್ದು, ಹೇಳಿಕೆಯನ್ನು ನಿ.ಪಿ.4 ಎಂದು ಗುರುತಿಸಿದ್ದು, ಇದಕ್ಕಿಂತ ಮೊದಲು ಪೊಲೀಸರು ನಡೆದ ಘಟನೆಯ ಕುರಿತು ತನ್ನ ಮರುಹೇಳಿಕೆಯನ್ನು ಪಡೆದಿದ್ದು, ಆರೋಪಿಯು ತಾನು ದೂರಿನಲ್ಲಿ ಹೇಳಿರುವಂತೆ ಮಾಡಿದ್ದು ಹೌದು ಆರೋಪಿ ತನಗೆ ಏನು ಮಾಡಿರುವುದಿಲ್ಲ ಎಂದು ತಾನು ತನ್ನ ಮರುಹೇಳಿಕೆಯಲ್ಲಿ ಯಾವುದೇ ವ್ಯತಿರಿಕ್ತವಾದ ಹೇಳಿಕೆಯನ್ನು ನೀಡಿರುವುದಿಲ್ಲ ತನಗೆ ಅನ್ಯಾಯವಾಗಿದ್ದರಿಂದ ತಾನು ಸ್ವ ಇಚ್ಚೆಯಿಂದ ದೂರನ್ನು ದಾಖಲಿಸಿದ್ದು. ಪೊಲೀಸರು ತನ್ನನ್ನು ಮರು ವಿಚಾರಣೆ ಮಾಡಿದಾಗ ತಾನು ನಡೆದ ಘಟನೆಯ ಕುರಿತು ಮಾತ್ರ ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ:

ಪ್ರಶ್ನೆ:6. ಪ್ರಾಸಾ 3: ಶ್ರೀಮತಿ ಪ್ರೀತಿ ಫೆರ್ನಾಂಡಿಸ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ: 05-07-2015 ರಂದು ಚರ್ಚ್ ನಲ್ಲಿ ಸಭೆ ಇದ್ದು, ಆಗ ನನ್ನೊಂದಿಗೆ ಚಾ.ಸಾ.6 ರವರು ಇದ್ದರು. ನಾನು ಸಭೆಯ ಕಾರ್ಯದರ್ಶಿಯಾಗಿದ್ದೆ. ಚಾ.ಸಾ.2 ರವರು ಪಂಚಾಯಿತಿಯ ಸದಸ್ಯರಾಗಿದ್ದರು. ಆಗ ಚಾ.ಸಾ.2 ರವರು ಪ್ರಾ.ಸಾ.1 ರವರನ್ನು ಕರೆದುಕೊಂಡು ಬಂದು ವಿಚಾರ ಮಾತನಾಡಬೇಕೆಂದು ಹೇಳಿದಾಗ ತಾವು ಏನು ಎಂದು ಕೇಳಲಾಗಿ ಪ್ರಾ.ಸಾ.1 ರವರು ದಿ: 26-06-2015 ರಂದು ಪಂಚಾಯಿತಿಗೆ ಹೋದಾಗ ಆರೋಪಿ ಉಗ್ರಾಣಿಯಾಗಿ ಕೆಲಸ ಮಾಡುತ್ತಿದ್ದು, ಆತ ಆಧಾರ್ ಕಾರ್ಡು, ರೇಷನ್ ಕಾರ್ಡು ಮಾಡಿಕೊಡುತ್ತೇನೆ ಎಂದು ಕರೆದು ಪ್ರಾ.ಸಾ.1ರವರಿಗೆ ಅಶ್ಲೀಲವಾಗಿ ವರ್ತಿಸಿ ವೀಡಿಯೋ ತೋರಿಸುವುದಾಗಿ ಹೇಳಿ ಆಕೆ ಅದೇ ವಿಚಾರವಾಗಿ ಅಳಲು ಶುರು ಮಾಡಿದ್ದು, ನಾವು ಆಕೆಯನ್ನು ಸಮಾಧಾನ ಪಡಿಸಿ ದೂರು ದಾಖಲಿಸುವಂತೆ ನಿರ್ದೇಶಿಸಿದ್ದು. ಅದೇ ರೀತಿ ಪ್ರಾ.ಸಾ.1ರವರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು. ಆ ಕುರಿತಾಗಿ ತಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ:

ಪ್ರಶ್ನೆ:7. ಪ್ರಾಸಾ 4: ವೆಂಕಟೇಶ ಖಾರ್ವಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ-2 ರಲ್ಲಿ ತನ್ನ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ದಿ: 08-07-2017 ರಂದು ಗಂಗೊಳ್ಳಿಯ ಹಳೆ ಪಂಚಾಯಿತಿಯಲ್ಲಿ ಮಾಡಿದ್ದು, ಆಗ ಚಾ.ಸಾ.2 ಮತ್ತು ಪೊಲೀಸರು ಇದ್ದರು. ಸ್ಥಳವನ್ನು ಪ್ರಾ.ಸಾ.1 ರವರು ತೋರಿಸಿದ್ದು. ಸದ್ರಿ ಸ್ಥಳ ಪಂಚಾಯಿತಿ ಕಚೇರಿಯ ಒಳಭಾಗವಾಗಿದ್ದು. ಪಂಚನಾಮೆಯನ್ನು 12-15 ರಿಂದ 1.00 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ:

ಪ್ರಶ್ನೆ:8. ಪ್ರಾಸಾ 7: ಮೋನಾ ಪೂಜಾರಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ: 06-07-2015 ರಂದು ತಾನು ಠಾಣಾ ಪ್ರಭಾರದಲ್ಲಿರುವಾಗ ಚಾ.ಸಾ.1ರವರು ಠಾಣೆಗೆ ಬಂದು ನೀಡಿದ ಲಿಖಿತ ಪಿರ್ಯಾದನ್ನು ಸ್ವೀಕರಿಸಿ ಆರಕ್ಷಕ ಉಪನಿರೀಕ್ಷಕರಿಗೆ ರವಾನಿಸಿದ್ದು. ಸಾಕ್ಷಿ ನಿ.ಪಿ.1 ರಲ್ಲಿ ತನ್ನ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ:

ಪ್ರಶ್ನೆ:9. ಪ್ರಾಸಾ 8: ಸುಬ್ಬಣ್ಣ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ: 06-07-2015 ರಂದು ಈ ಪ್ರಕರಣದ ಕಡತವನ್ನು ಚಾ.ಸಾ.11 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿದ್ದು. ಆರೋಪಿ ಪತ್ತೆಯ ಬಗ್ಗೆ ಮಾಹಿತಿಯನ್ನು ಕಲೆ ಹಾಕಿ ಆರೋಪಿ ತ್ರಾಸಿ ಜಂಕ್ಷನ್ ಹತ್ತಿರ ಬಸ್ಸಿ ಗಾಗಿ ಕಾಯುತ್ತಿರುವ ಬಗ್ಗೆ ಬಂದ ಮಾಹಿತಿ ಮೇರೆಗೆ ಆತನನ್ನು ವಶಕ್ಕೆ ಪಡೆದು ರಾತ್ರಿ 8-30 ಗಂಟೆಗೆ ಠಾಣೆಗೆ ಹಾಜರಾಗಿ ದಸ್ತಗಿರಿ ನಿಯಮ ಪಾಲಿಸಿ ನಂತರ ಆರೋಪಿ ಪಿರ್ಯಾದುದಾರರಿಗೆ ಅಶ್ಲೀಲ ಚಿತ್ರವನ್ನು ತೋರಿಸಿದ ಮೊಬೈಲ್ ಪೋನನ್ನು ಪಂಚರಾದ ನಾಗರಾಜ ಮತ್ತು ರಮೇಶರವರ

ಸಮಕ್ಷಮದಲ್ಲಿ ಪರಿಶೀಲಿಸಿದಾಗ ಸ್ಯಾಮ್ ಸಂಗ್ ಗ್ಯಾಲಕ್ಸಿ ಯಂಗ್ ಜಿ2 ಹಾಗೂ 2 ಸಿಮ್ ನ್ನು ವಶಕ್ಕೆ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ10. ಪ್ರಾಸಾ 8: ಸುಬ್ಬಣ್ಣ ರವರು ಮುಂದುವರೆದು ನಂತರ ಘಟನೆಯ ಬಗ್ಗೆ ಆರೋಪಿಯನ್ನು ವಿಚಾರಿಸಿದಾಗ ಈ ಘಟನೆ ನಡೆದಂತಹ ವಾಟ್ಸಪ್ ನಲ್ಲಿ ಇದ್ದಂತಹ ಅಶ್ಲೀಲ ಚಿತ್ರವನ್ನು ಡಿಲೀಟ್ ಮಾಡಿರುವುದಾಗಿ ತಿಳಿಸಿದ್ದು. ಸದ್ರಿ ಮೊಬೈಲ್ ಸೆಟ್ ನ್ನು ಮುಂದಿನ ಕ್ರಮಕ್ಕಾಗಿ ಒಂದು ಕವರ್ ನಲ್ಲಿ ಹಾಕಿ ಅರಗು ಶೀಲು ಮಾಡಿ ಲೇಬಲ್ ಅಂಟಿಸಿ ಪಂಚನಾಮೆ ಮೂಲಕ ರಾತ್ರಿ 8-30 ರಿಂದ 9.00 ಗಂಟೆಯವರೆಗೂ ವಶಕ್ಕೆ ಪಡೆದಿದ್ದು. ನಂತರ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಪಡೆದಿದ್ದು. ನಂತರ ವಶಕ್ಕೆ ಪಡೆದ ಸ್ವತ್ತನ್ನು ಠಾಣಾ ಸ್ವತ್ತು ಪಟ್ಟಿ ನಂಬ್ರ 66/2015ರಲ್ಲಿ ಅಳವಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ11. ಪ್ರಾಸಾ 8: ಸುಬ್ಬಣ್ಣ ರವರು ಮುಂದುವರೆದು ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ರಿಮ್ಯಾಂಡ್ ವರದಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು. ಇದು ಮಹಿಳೆಯ ಮೇಲೆ ದೌರ್ಜನ್ಯ ಪ್ರಕರಣವಾದ ಕಾರಣ ಪ್ರಕರಣದ ಕಡತವನ್ನು ಮೇಲಾಧಿಕಾರಿಯವರ ಮೂಲಕ ಚಾಸಾ-13 ರವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿಯು ಆರೋಪಿ ದಸ್ತಗಿರಿ ಮತ್ತು ಸ್ವತ್ತು ಸ್ವಾಧೀನತಾ ಪಂಚನಾಮೆಗಳಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ಆ ದಿನ ವಶಕ್ಕೆ ಪಡೆದ ಮೊಬೈಲ್ ಪೋನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ12. ಪ್ರಾಸಾ 9: ಶ್ರೀಮತಿ ಸುಜಾತಾ ಸಾಲಿಯಾನ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 08-07-2015 ರಂದು ಚಾ.ಸಾ.12 ರವರಿಂದ ಕಡತವನ್ನು ಪಡೆದು ಪರಿಶೀಲಿಸಿ ತನಿಖೆ ಮುಂದುವರೆಸಿದ್ದು. ಅದೇ ದಿನ ತಕ್ಷೀರು ಸ್ಥಳದ ಮಹಜರನ್ನು 12-15 ರಿಂದ 1.00 ರವರೆಗೆ ತಯಾರಿಸಿ ಸಾಕ್ಷಿದಾರರಾದ ಚಾ.ಸಾ.2 ಮತ್ತು 5 ರವರ ಸಮಕ್ಷಮ ತಯಾರಿಸಿದ್ದು. ಮಹಜರು ಕಾಲಕ್ಕೆ ಛಾಯಚಿತ್ರವನ್ನು ತೆಗೆದಿದ್ದು. ಅದೇ ದಿನ ಚಾ.ಸಾ.1 ರವರ ಮರುಹೇಳಿಕೆ ಹಾಗೂ ಚಾ.ಸಾ.2 ರಿಂದ 4, 6 ಮತ್ತು 7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ13. ಪ್ರಾಸಾ 9: ಶ್ರೀಮತಿ ಸುಜಾತಾ ಸಾಲಿಯಾನ್ ರವರು ಮುಂದುವರೆದು ದಿಃ 16-07-2015 ರಂದು ಚಾ.ಸಾ.1 ರವರು ನ್ಯಾಯಾಲಯದ ಮುಂದೆ ಹಾಜರುಪಡಿಸಿ ಕಲಂ 164ರ ಹೇಳಿಕೆಯನ್ನು ಪಡೆದಿದ್ದು. ಆಪಾದಿತನ ಮೊಬೈಲು ಮತ್ತು ಸಿ.ಡಿ.ಆರ್ ರೆಕಾರ್ಡ್ ನ್ನು ಪಡೆದು ಕಡತಕ್ಕೆ ಅಳವಡಿಸಿದ್ದು. ನಂತರ ಆರೋಪಿ ಗಂಗೊಳ್ಳಿ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಹಾಜರಾತಿ ಪ್ರಮಾಣ ಪತ್ರವನ್ನು ಪಡೆದು ದಿಃ 02-01-2016 ರಂದು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ನಿಪಿ-2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-3ನ್ನು ನೋಡಿ ಗುರುತಿಸಿರುತ್ತಾರೆ. ಗಂಗೊಳ್ಳಿ ಗ್ರಾಮ ಪಂಚಾಯಿತಿಯ ಪತ್ರವನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 14. ನಿಮಗೆ ಹೆಚ್ಚಿಗೆ ಹೇಳುವುದು ಏನಾದರೂ ಇದೆಯಾ?

ಉತ್ತರಃ

ಪ್ರಶ್ನೆಃ 15 : ನಿಮ್ಮ ಪರವಾಗಿ ಸಾಕ್ಷಿಗಳಿದ್ದಾರ?

ಉತ್ತರಃ

ಮೇಲ್ಕಂಡ ಹೇಳಿಕೆಯನ್ನು ಆರೋಪಿ ನುಡಿದ ಶಬ್ದಗಳಲ್ಲಿಯೇ ದಾಖಲಿಸಿದ್ದು ಅದು ನಿಜ ಹಾಗೂ ಸತ್ಯಾಂಶಗಳಿಂದ ಕೂಡಿರುವುದಾಗಿ ಪ್ರಮಾಣೀಕರಿಸಿದೆ.

ಇಂದು ದಿನಾಂಕ 06 ನೇ ಮಾರ್ಚ 2025.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.